ಶ್ರೀ ಕೆ. ಪ್ರಭಾಕರ್.—ಈ ಯಂತ್ರಗಳನ್ನು ಆಚೆವು ಇಡುವುದು, ಮಾರಾಟ ಮಾಡಿರುವುದು ಈ ರೀತಿ ನಡೆದಿದೆ ಎಂದು ಗೊತ್ತಾಗಿದೆ. ಅದನ್ನು ಇಲಾಖೆಯಿಂದ ಪತ್ತೆ ಮಾಡಿ ಅವರಿಗೆ ಟಿಕ್ನಿಕಲ್ ಗೈಡೆನ್ಸ್ ಕೊಡುವುದು ಮಂತ್ರ ಅವರು ಏನು ಮಾಡಬೇಕು ಎನ್ನುವುದರ ಬಗ್ಗೆ ತಿಳುವಳಿಕೆ ಕೊಡುವ ಉದ್ದೇಶದಿಂದ ಸರ್ವೆ ಮಾಡಿ ವಿವರಗಳನ್ನು ಸಭೆಗೆ ತಿಳಿಸಬಲ್ಲಿರೇ ?

ಶ್ರೀ ಎನ್. ರಾಚಯ್ಯ.—ಮಾಡುತ್ತೇವೆ.

Construction of a Causeway Across Hemavathy River

79 SRI G. PUTTASWAMY (Mudigere)—

Will the Minister for Public Works be pleased to state:—

(*a*) whether it has come to the notice of the Government that in the absence of a causeway across Hemavathi river flowing near Muggaravalli Village of Mudigere Taluk, the residents of that area are put to hardship in traversing and transporting seeds. manure,etc;

(*b*) the probable cost fot construction of a causeway and about one furlong of road from K. M. Road across Hemavathi river in the vicinity of this village ;

(*c*) whether amount will be provided in the 1975-76 Budget for the construction work of the causeway ?

SRI H. M. CHANNABASAPPA (Minister for Public Works).—

(*a*) Yes.

(*b*) Rs. 6·00 lakhs approximately.

(*c*) Will be examined.

ಶ್ರೀ ಜಿ. ಪುಟ್ಟಸ್ವಾಮಿ.—ಹಿಂದೆ ಮಾನ್ಯ ಚನ್ನಬಸಪ್ಪನವರು ಮುರಾಪಂತ್ರ ಇಲಾಖೆಯ ಮಂತ್ರಿಗಳಾಗಿದ್ದಾಗ ಕಾಸ್‌ವೇ ದಾಟುವಾಗ ಬಹಳ ಪ್ರಯಾಸದಿಂದ ಜನರು ಅವರನ್ನು ಎತ್ತಿಕೊಂಡು ದಾಟಿದ್ದು ಗೊತ್ತಿದೆ, ಆದುದರಿಂದ ೧೯೭೫-೭೬ನೇ ಆಯವ್ಯಯದಲ್ಲಿ ಈ ಕಾಸ್‌ವೇ ಸೇರಿಸಿ ಜಾಗ್ರತೆ ಕೆಲಸವನ್ನು ಮಾಡಿಕೊಡುವುದಕ್ಕೆ ಆಶ್ವಾಸನೆಯನ್ನು ಕೊಡುತ್ತಾರೆಯೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಆಗುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ —ಸಮಾನಾವಕಾಶ ರಾಜ್ಯದಲ್ಲಿ ಎಲ್ಲ ಕಡೆಗೂ ಕೊಡಬೇಕು. ಇದು ಅತ್ಯಾವಶ್ಯಕವಾಗಿ ಆಗಬೇಕಾದ ಕೆಲಸ ಜನಜಾನುವಾರುಗಳಿಗೆ ತೊಂದರೆಯಾಗುತ್ತದೆಂದು ಒಪ್ಪಿಕೊಂಡ ಮೇಲೆ ಕೆಲಸ ಮಾಡಿಸುವುದು ಸರ್ಕಾರದ ಕರ್ತವ್ಯವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು. ಆದರೆ ಅದಕ್ಕಿಂತಲೂ ಬಹಳ ಹೆಚ್ಚಿನ ಪ್ರಾಮುಖ್ಯತೆ ಯುಳ್ಳ ಕೆಲಸಗಳಿರುವುದರಿಂದ ಈ ಕೆಲಸ ಅದರ ಸರದಿಗಾಗಿ ಕಾಯಬೇಕು.

P. U. C. Teaching Institutions

225 SRI T.R. SHAMANNA (Fort).—

Will the Minister for Education be pleased to state.—

(*a*) the number of P. U. C. teaching Institutions;

(*b*) out of the above, the institutions :

(i) under the charge of D.P.I. attached to Secondary Education Institutions.

(ii) under the charge of P. U. E. Board (Junior College).

(iii) attached to I grade college controlled by Directorate of Collegiate Education.

(e) the steps taken to bring all P.U.C. teaching institutions under one authority so astoensure proper control and imparting efficient P.U.C. Education ?

SRI M. MALLIKARJUNASWAMY (Minister for Education).—

(a) 510.

(b) (i) 236.
(ii) 64.
(iii) 190.

(c) Steps are being taken to bifurcate P.U.C. classes from bigger Higher Secondary Schools.

ಶ್ರೀ ಟಿ. ಆರ್. ಶಾಮಣ್ಣ.—ಪಿ.ಯು.ಸಿ, ಕೋರ್ಸ್ ಬೇರೆ ಬೇರೆ ಅಧಿಕಾರಿಗಳು ನಡೆಸಂತ್ತಿರುವುದು ಅಷ್ಟು ಉತ್ತಮವಾದುದಲ್ಲ, ತಾರತಮ್ಯವಿದೆ, ಪಾಠಪ್ರವಚನಗಳಲ್ಲಿ ವ್ಯತ್ಯಾಸವಾಗುತ್ತದೆ ಎನ್ನುವುದರ ಬಗ್ಗೆ ಮಂತ್ರಿಗಳ ಅಭಿಪ್ರಾಯವೇನು ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ,—ಮಾನ್ಯ ಸದಸ್ಯರು ಹೇಳುವುದನ್ನು ಪೂರ್ಣವಾಗಿ ಒಪ್ಪುವುದಕ್ಕಾಗುವುದಿಲ್ಲ. ಆಡಳಿತ ದೃಷ್ಟಿಯಿಂದ ಹಾಗೂ ಶಿಕ್ಷಣದ ಔನ್ನತ್ಯವನ್ನು ಕಾಪಾಡತಕ್ಕ ದೃಷ್ಟಿಯಿಂದ ಇದನ್ನು ಬೈಫರ್ಕೇಟ್ ಮಾಡುವುದು ಸರಿ ಎನ್ನುವ ತೀರ್ಮಾನವನ್ನು ೧೯೭೨–೭೩ರಲ್ಲಿ ತೆಗೆದುಕೊಂಡು ಅದನ್ನು ಇಲಾಖೆಯ ವಾರ್ಷಿಕ ವರದಿಯಲ್ಲಿ ನಮೂದಿಸಿದ್ದೇವೆ.

ಶ್ರೀ ಟಿ.ಆರ್. ಶಾಮಣ್ಣ.—ಪಿ.ಯು.ಸಿ. ವಿದ್ಯಾಭ್ಯಾಸವನ್ನು ಕೊಡತಕ್ಕ ಅನೇಕ ಕಾಲೇಜುಗಳಲ್ಲಿ ಶಾಲೆಗಳಲ್ಲಿ ಸಾಕಾದಷ್ಟು ಲೈಬ್ರರಿ ಇಲ್ಲ, ಸಾಕಾದಷ್ಟು ಸ್ಥಳಾವಕಾಶವಿಲ್ಲ ಕೆಲವು ಕಡೆ ಉಪಾಧ್ಯಾಯರಿಲ್ಲ, ಹೀಗಿರತಕ್ಕ ತೊಂದರೆಗಳನ್ನು ಬಗೆಹರಿಸುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆ ?

ಶ್ರೀ ಎಂ. ಮಲ್ಲಿಕಾರ್ಜುನಸಾ ಮಿ.—ಸರ್ಕಾರದವರು ೧೯೭೦ನೇ ಇಸವಿಯಲ್ಲಿ ತೀರ್ಮಾನವನ್ನು ತೆಗೆದುಕೊಂಡು ಪಿ.ಯು;ಸಿ ಶಿಕ್ಷಣವನ್ನು ಪ್ರತ್ಯೇಕ ಮಾಡಿದರು. ಕೊಠಾರಿ ಕಮಿಟಿ ಸಿಫಾರಸಿನ ಮೇಲೆ ಮತ್ತು ಕೇಂದ್ರ ಸರ್ಕಾರದ ಆದೇಶದಂತೆ ಈ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳತಕ್ಕದ್ದು ಶಾಶ್ವತವಾದ ಕಟ್ಟಡಗಳು ಹಾಗೂ ಪುಸ್ತಕ ಭಂಡಾರ ಮತ್ತು ಪ್ರಾಯೋಗಿಕ ಸಾಮಗ್ರಿಗಳು ಎಲ್ಲವೂ ಕೂಡ ಕೊರತೆ ಇದೆ, ಕೆಲವು ಸಂದರ್ಭಗಳಲ್ಲಿ ಉಪಾಧ್ಯಾಯರಿದ್ದು ಸಾಕಾದಷ್ಟು ವಿದ್ಯಾರ್ಥಿಗಳು ಇಲ್ಲದೆ ಇರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆ ಇದನ್ನೆಲ್ಲ ಪರಿಹರಿಸಬೇಕೆಂಬ ದೃಷ್ಟಿಯಿಂದಲೇ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ರಾಷ್ಟ್ರೀಯ ನೀತಿಗನುಗುಣವಾಗಿ ನಮ್ಮ ಸರ್ಕಾರದವರು ಈ ಒಂದು ಯೋಜನೆಯನ್ನು ಅನುಷ್ಠಾನಕ್ಕೆ ತಂದರು. ಕೇಂದ್ರ ಸರ್ಕಾರದವರು ಹಾಕಿರುವ ನೀತಿಯ ಪ್ರಕಾರ ಅನುಷ್ಠಾನಕ್ಕೆ ತಂದಿರುವುದರಿಂದ ಇದಕ್ಕೆ ತಗಲತಕ್ಕ ಸುಮಾರು ೬೦೦ ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಡಬೇಕು ಎಂದು ಪ್ರಾರ್ಥನೆ ಮಾಡಿದ್ದೇವೆ.

ಶ್ರೀ ಟಿ. ಆರ್. ಶಾಮಣ .—ಫರ್ಸ್ಟ್ ಗ್ರೇಡ್ ಕಾಲೇಜಿನಲ್ಲಿ ಯು.ಜಿ.ಸಿ ಸ್ಕೇಲನ್ನು ಉಪಾಧ್ಯಾಯರಿಗೆ ಕೊಡುತ್ತಿದ್ದಾರೆ ಮತ್ತು ಇದೇ ರೀತಿಯ ಸಂಬಳವನ್ನು ಹೈಯರ್ ಸೆಕೆಂಡರಿ ಶಾಲೆಗಳಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ವ್ಯತ್ಯಾಸವನ್ನು ಪರಿಹಾರ ಮಾಡಲು ಒಂದು ಏಕರೂಪವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ವಿಚಾರ ಸಂಬಂಧಪಟ್ಟ ಪ್ರಶ್ನೆಯಲ್ಲಿ ಬರುವುದಿಲ್ಲ. ಆದರೂ ಕೂಡ ಮಾನ್ಯ ಸದಸ್ಯರು ಕೇಳಿದ್ದಕ್ಕೆ ಹೇಳುತ್ತೇನೆ. ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿದ್ದೇವೆ ಹೈಸ್ಕೂಲುಗಳಲ್ಲಿ ಕೆಲಸ ಮಾಡುತ್ತಿದ್ದವರಂ ಕಾಲೇಜಿನಲ್ಲಿಯೂ ಕೆಲಸ ಮಾಡಬಹುದು. ಖಾಸಗಿ ಸಂಸ್ಥೆಗಳವರು ಹೈಸ್ಕೂಲುಗಳಲ್ಲಿ ಜೂನಿಯರ್ ಕಾಲೇಜುಗಳನ್ನು ಸ್ಥಾಪನೆ ಮಾಡಿದ್ದಾರೆ ಅದು ಬೇರೆ ಇದೆ. ಈ ಎಲ್ಲ ಪ್ರಶ್ನೆಗಳನ್ನೂ ಪರಿಶೀಲನೆ ಮಾಡಬೇಕಾಗುತ್ತದೆ.

MADAM SPEAKER.—Now Question Hour is over.

QUESTION FOR ANSWERS ON THE DAY
(But not taken up)

Repairs to road from Siruguppa to Hatcholli

470 SRI B. E. RAMAIAH (Siruguppa).—

Will the Minister for Public Works be pleased to state.—

(*a*) whether the Government is aware that the proposals to repair the road from Siruguppa to Hatcholli on to Nadanga—Vattumuruvani connection to Siruguppa to Adoni Road were included in last two years Budgets;

(*b*) whether the Government is aware that the plan and estimates of the above work is pending sanction since two years;

(*c*) the reasons for not taking immediate action to sanction the above plan and estimate,

(*d*) whethe Government is aware that the Chief Engineer for roads has visited the road and opined that the road requires repairs roads immediately ?

SRI H. M. CHANNABASAPPA (Minister for Public Works).—

(*a*) Yes.
(*b*) Yes.
(*c*) Due to paucity of funds
(*d*) Yes.

Dam Across River "Uttarapinakini"

743 SRI K. R, THIMMARAYAPPA (Pavagada).—

Will the Minister of State for Major and Medium Irrigation be pleased to state.—

when the construction of Dam across river "Uttara pinakini" will be taken up ?

SRI SUBHASH ASTHURE (Minister of State for Major and Medium Irrigation),—

The project is under examination and will be taken up after the same is cleared by Government of India.